**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,ರವರ ನ್ಯಾಯಾಲಯ, ಕಡೂರು**

**ಸಿ.ಸಿ.ನಂ.454/2019**

**ದಿನಾಂಕಃ20.11.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

ಪಿ.ಡಬ್ಲ್ಯುಃ8 ಸಿ.ಡಬ್ಲ್ಯುಃ9

ಸಾಕ್ಷಿಯ ಹೆಸರು ಃ ಹಾಲೇಶ
ತಂದೆಯ ಹೆಸರು ಃ ಓಂಕಾರಪ್ಪ
ವಯಸ್ಸು ಃ 37 ವರ್ಷ
ಉದ್ಯೋಗ ಃ ಆಟೋ ಚಾಲಕ
ವಾಸ ಃ ಬೀರೂರು

**ಮುಖ್ಯ ವಿಚಾರಣೆಃ ಮಾನ್ಯ ಹಿ ಸ ಸ ಅ ರವರಿಂದಃ**

ಸಾಕ್ಷಿಗೆ ದಿಃ18.11.2015 ರಂದು ಜರುಗಿಸಿದ ಮಾಲು ಅಮಾನತ್ತು ಮಹಜರನ್ನು ತೋರಿಸಿ ಕೇಳಲಾಗಿ, ಅದರಲ್ಲಿರುವ ಸಹಿ ತನ್ನದು ಎಂದು ಗುರುತಿಸಿದ್ದರಿಂದ ಸದರಿ ಮಹಜರನ್ನು ನಿಪಿ-22 ಎಂದು, ಸಾಕ್ಷಿ ಸಹಿಯನ್ನು ನಿಪಿ-22(ಎ) ಎಂದು ಗುರುತಿಲಾಯಿತು. ಸದರಿ ಸಹಿಯನ್ನು ಸುಮಾರು 5-6 ವರ್ಷಗಳ ಹಿಂದೆ ಮಾಡಿರುತ್ತೇನೆ, ಅದನ್ನು ಎಲ್ಲಿ ಮಾಡಿರುತ್ತೇನೆ ಎಂದು ನನಗೆ ನೆನಪಿಲ್ಲ. ನನ್ನ ಸಮಕ್ಷಮ ಪೋಲೀಸರು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಸದರಿ ಛಾಯಾಚಿತ್ರವನ್ನು ನಿಪಿ-23 ಎಂದು ಗುರುತಿಸಲಾಯಿತು. ಸದರಿ ಛಾಯಾಚಿತ್ರವನ್ನು ಬೀರೂರು ಪೋಲೀಸ್ ಠಾಣೆಯಲ್ಲಿ ತೆಗೆಯಲಾಗಿರುತ್ತದೆ, ಯಾವಾಗ ತೆಗೆಯಲಾಗಿರುತ್ತದೆ ಎಂದು ನನಗೆ ನೆನಪಿಲ್ಲ. 8 ನೇ ಆರೋಪಿ ನನ್ನ ಪರಿಚಯ ಇರುವುದಿಲ್ಲ. ನನ್ನ ಸಮಕ್ಷಮ 8 ನೇ ಆರೋಪಿ ಪೋಲೀಸರಿಗೆ ರೂ.60,000/- ಹಣವನ್ನು ನೀಡಿರುವುದನ್ನು ನಾನು ನೋಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ರವರು ಅನುಮತಿ ಕೋರಿದ್ದು ಸಾಕ್ಷಿಯ ಹೇಳಿಕೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು. )**

**<u>ಪಾಟೀ ಸವಾಲುಃ ಮಾನ್ಯ ಹಿಸಸಅ ಅವರಿಂದಃ</u>**

ದಿಃ18.11.2015 ರಂದು ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು ಅಂದರೇ ಸರಿಯಲ್ಲ. ಅಲ್ಲಿ ಈ ಪ್ರಕರಣದ 8 ನೇ ಆರೋಪಿ ಮಂಜಪ್ಪ ಇದ್ದರು ಅಂದರೆ ಸರಿಯಲ್ಲ. ಮಂಜಪ್ಪನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ರೂ.60,000/-ಗಳನ್ನು ಠಾಣೆಯಲ್ಲಿ ಹಾಜರುಪಡಿಸಿದ್ದು ಅದನ್ನು ಪೋಲೀಸರು ನಿಪಿ-22 ರಂತೆ ಮಹಜರ್ ಜರುಗಿಸಿ, ನನ್ನ ಸಮಕ್ಷಮ ಅಮಾನತುಪಡಿಸಿಕೊಂಡಿರುತ್ತಾರೆ ಅಂದರೆ ಸರಿಯಲ್ಲ. ಮಂಜಪ್ಪ ಹಾಜರುಪಡಿಸಿದ ನೋಟುಗಳಲ್ಲಿ ಒಟ್ಟು ರೂ.1,000/- ಮುಖಬೆಲೆಯ 13 ನೋಟುಗಳು ಹಾಗೂ ರೂ.500/-ಗಳ ಮುಖಬೆಲೆಯ 94 ನೋಟುಗಳು ಇದ್ದವು ಅಂದರೆ ಸರಿಯಲ್ಲ. ಸದರಿ ಎಲ್ಲಾ ನೋಟುಗಳನ್ನು ನಿಪಿ-22 ರಂತೆ ಅಮಾನತುಪಡಿಸಿಕೊಂಡು ನಿಪಿ-23 ರಂತೆ ಛಾಯಾಚಿತ್ರ ತೆಗೆದಿರುತ್ತಾರೆ ಅಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರುಗಳು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.</u>**

**ಮರು ವಿಚಾರಣೆಃ ಇರುವುದಿಲ್ಲ.**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3 ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.